ಬೇಕಾದ್ದೆಲ್ಲಾ ನಾನೇ ಮಾಡಿ ಬಡಿಸುತ್ತಿದ್ದದ್ದು... ನೀವು ಊರಿಂದ ಬರುವುದನ್ನೇ ಕಾಯ್ತಿದ್ದೆ. ನನ್ನಿಂದ ದೇವ್‌ಗೆ ತುಂಬಾ ನೋವಾಗಿದೆ. ಈಗ ನಾನು ಎಂಥ ಮಾಡಲಿ ಹೇಳಿ ಸುಮಿತ್ರಕ್ಕ?"

"ಅಷ್ಟಕ್ಕೆ ಅಳ್ತಾರೇನೋ ದೇವು. ತಿಳೀದೇ ಆಯ್ತು. ಆದದ್ದೆಲ್ಲಾ ಮರೆತುಬಿಡು. ಒಳ್ಳೇ ಕ್ಲಾಸ್‌ಮೇಟ್ ಸಿಕ್ಕಂಗೆ ಆಯ್ತು. ಕಷ್ಟಪಟ್ಟು ಓದು."

ಉಷಾ–ದೇವರಾಜ ಒಮ್ಮೆ ನಗುವುದರ ಮೂಲಕ ಕಹಿಯನ್ನು ಮರೆತರು. ಆದರೂ ತಾನು ಮಾಡಿದ್ದು ತಪ್ಪು ಎಂಬ ಖಿನ್ನತೆ–ಉಷಾಗೆ, ತನಗೆ ಅಪಮಾನವಾಯಿತು ಎಂಬ ನೋವು–ದೇವರಾಜನಿಗೆ ಕಡಿಮೆ ಪ್ರಮಾಣದಲ್ಲಿಯಾದರೂ ಮುಖದಲ್ಲಿ ಉಳಿದೇಬಿಟ್ಟಿತು. ಸಂಜೆ ಮನೆಗೆ ಊಟಕ್ಕೆ ತಪ್ಪದೆ ಬರಬೇಕೆಂದು ಆಹ್ವಾನಿಸಿ ಉಷಾ ತನ್ನ ಬಣ್ಣದ ಛತ್ರಿಯನ್ನು ಠಕ್ಕನೆ ಅರಳಿಸಿ ಉತ್ಸಾಹದ ನಡಿಗೆಯಲ್ಲಿ ಹೊರ ನಡೆದಳು.

**ಇಲ್ಲಿ ಸೂರ್ಯನನ್ನು ಬಯಸಿ ಬಯಸಿ ನೋಡಬೇಕು. ಅದೇನು ಭಾಷೆಯೋ ! ಕಸ್ಲೆ ಪಿಸ್ಲೆ ಅಂತ ಮಾತನಾಡಿ ಜೀವ ತಿಂತಾರೆ. ಈರುಳ್ಳಿ ಆಲೂಗೆಡ್ಡೆ ಅಂದರೂ ತರಕಾರಿ ಮಾರುವ ಹೆಂಗಸಿಗೆ ಅರ್ಥವಾಗುವುದಿಲ್ಲ. ಯಾವಾಗಲೂ ಮುಸ್ಸಂಜೆಯಾಗಿದ್ದಂತೆಯೇ ಅನ್ನಿಸ್ತದೆ.**

★★★

ಶ್ರೀರಾಮು ಕಾರವಾರಕ್ಕೆ ವರ್ಗವಾದಂದಿನಿಂದ ಊಟ ಮಾಡುತ್ತಿದ್ದದ್ದು ಗೋಪಾಲ ನಾಯಕರ ಮನೆಯಲ್ಲಿ. ಅವರಿಗೆ ಇಬ್ಬರೇ ಹೆಣ್ಣು ಮಕ್ಕಳು. ಹಿರಿಯವಳು ರತ್ನಾ ನಾಯಕ್. ಒಂದು ಹಂತದಲ್ಲಿ ಶ್ರೀರಾಮುಗೆ ರತ್ನಳನ್ನು ಕೊಡುವ ಯೋಚನೆಯೂ ಗೋಪಾಲ ನಾಯಕರಿಗೆ ಬಂದಿತ್ತು. ಆದರೆ ಶ್ರೀರಾಮು ನಯವಾಗಿ ತಿರಸ್ಕರಿಸಿದ್ದರು. ತನ್ನೂರಿಗೆ ಹೋಗಿ ಸುಮಿತ್ರಳನ್ನು ಮದುವೆಯಾಗಿ ಬಂದದ್ದೂ ಆಗಿತ್ತು. ಒಂದು ಕ್ಷಣ ಸಣ್ಣ ಅಸಂತೃಪ್ತಿಯ ಎಳೆ ಕಂಡು ಬಂದಿದ್ದರೂ ಮತ್ತೆ ಎಲ್ಲಾ ಸಲೀಸಾಗಿತ್ತು. ರತ್ನ ಬಿ.ಎಡ್. ಮುಗಿಸಿ ನೌಕರಿ ಹಿಡಿದ ಮೇಲೆ, ತನ್ನ ಸಹೋದ್ಯೋಗಿಯೊಬ್ಬನನ್ನೇ ಪ್ರೀತಿಸಿ ವಿವಾಹವಾದ ಮೇಲೆ ಸಮಸ್ಯೆಯೇ ಇಲ್ಲದಾಗಿತ್ತು.

ಉಷೆ ಉಷೆಯೇ. ರಾಗ ರಂಗು ಚೆಲ್ಲಿಕೊಂಡ ಮುಖದ ಒಡತಿ. ಪುಟ್ಟ ಷೋಡಶಿ. ಕೊಂಚ ಸಿಡುಕು. ಮರುಕ್ಷಣ ಬೆಣ್ಣೆಯಂತೆ ಕರಗಿಬಿಡುವವಳು. ಶ್ರೀರಾಮುಗೆ ನಿತ್ಯ ಗೋಳು ಹೊಯ್ದುಕೊಳ್ಳುತ್ತಿದ್ದವಳು. ಓದಿನಲ್ಲಿ ಚುರುಕು. ವ್ಯಂಗ್ಯ ಅಣಕದ ಮಾತಿನ ಹುಡುಗರನ್ನು ಕಂಡರೆ ಉರಿದು ಬೀಳುವವಳು. ಇದರ ಫಲವೇ ದೇವರಾಜನಿಗೆ ಕಪಾಲಮೋಕ್ಷವಾದದ್ದು. ಆ ತಪ್ಪಿಗೆ ಪ್ರಾಯಶ್ಚಿತ ಮಾಡಿಕೊಳ್ಳುವ ಸಲುವಾಗಿಯೂ. ನವ ದಂಪತಿಯನ್ನು ಸತ್ಕರಿಸುವ ನೆಪದಲ್ಲಿಯೂ ಅಂದು ಅವರನ್ನೆಲ್ಲಾ ಆಹ್ವಾನಿಸಿದ್ದಳು.

"ನಾನು ಬರಾಕಿಲ್ಲ. ನೀವು ಹೋಗಿದ್ದು ಬನ್ನಿ" ಅಂತ ದೇವರಾಜ ಹನುಮಂತನ ಮುಸುಡಿ ಮಾಡಿದಾಗ ಅಕ್ಕ ರೇಗಿದಳು : "ಬಾರೋ ಕಂಡಿವ್ನಿ ಮಹಾ ಮರ್ಯಾದಸ್ತ. ಪಾಪ! ಆ ಹುಡ್ಗಿ ತಪ್ಪಾಯ್ತು ಅಂತ ಕ್ಷಮೆ ಕೇಳಿ ಕೈಹಿಡಿದು ಬೇಡ್ಕಂಡವ್ಳೆ. ನೀನು ಬರದಿದ್ರೆ ನೊಂದುಕೊಳ್ತಾಳೆ".